ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ 2

ಎರಡನೆಯ ಪದ್ಯ 2

ಭಾವಜಾರಿಪ್ರಿಯ 2

ನಿರಾಮಯ 8

ರಾವಣಾಂತಕ ರಘುಕುಲಾನ್ವಯ 14

ದೇವ 17

ಅಸುರವಿರೋಧಿ 19

# ವಿಶ್ವನಂದಿನಿ ಲೇಖನಮಾಲೆ — 21

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಎರಡನೆಯ ಪದ್ಯ

ಈ ಪದ್ಯದ ಮೊದಲನೆಯ ಭಾಗದ ಅರ್ಥವನ್ನು ತಿಳಿದೆವು. ಈಗ ಎರಡನೆಯ ಭಾಗದ ಅರ್ಥ —

**ದೇವದೇವ ಜಗದ್ಭರಿತ ವಸು-**
**ದೇವಸುತ ಜಗದೇಕನಾಥ ರ-**
**ಮಾವಿನೋದಿತ ಸಜ್ಜನಾನತ ನಿಖಿಲಗುಣಭರಿತ ।**
**ಭಾವಜಾರಿಪ್ರಿಯ ನಿರಾಮಯ**
**ರಾವಣಾಂತಕ ರಘುಕುಲಾನ್ವಯ**
**ದೇವ ಅಸುರವಿರೋಧಿ ರಕ್ಷಿಸು ನಮ್ಮನನವರತ ॥ ೨ ॥**

## ಭಾವಜಾರಿಪ್ರಿಯ

ಸಾಧನಜೀವನದಲ್ಲಿ ಅತ್ಯಂತ ದೊಡ್ಡದಾದ ಕಂಟಕ ಎಂದರೆ ಕಾಮ. ದುಷ್ಟಪದಾರ್ಥಗಳ ಬಯಕೆ ಮನುಷ್ಯನನ್ನು ಸಾಧನಪಥದಿಂದ ಚ್ಯುತಗೊಳಿಸಿಬಿಡುತ್ತದೆ. ಚೆಲುಚೆಲುವಾದ

ರೂಪವನ್ನು ಕಾಣಬಯಸುವ ಕಣ್ಣು, ಪ್ರೀತಿಪಾತ್ರರ ನುಡಿಗಳನ್ನು ಇಂಪಾದ ಧ್ವನಿಗಳನ್ನು ಕೇಳಲು ಕಾತರಿಸುವ ಕಿವಿ, ದುರ್ವಾಸನೆ ಬೇಡ, ಸುವಾಸಿತ ಪ್ರದೇಶವೇ ಬೇಕು ಎಂದು ಪಟ್ಟುಹಿಡಿಯುವ ಮೂಗು, ರುಚಿಯಾದದ್ದನ್ನೇ ನೀಡು ಎಂದು ಆಗ್ರಹಿಸುವ ನಾಲಿಗೆ, ಕೋಮಲಾಂಗದ ಹೆಣ್ಣಿನ ಅಪ್ಪುಗೆಯ ಸುಖವನ್ನು ಬಯಸುವ ತೊಗಲು ಇವೆಲ್ಲವೂ ಸಾಧಕಜನರ ಪರಮವೈರಿಯಾದ ಕಾಮದ ಆವಾಸಸ್ಥಾನಗಳು. ಮನಸ್ಸಿನೊಳಗೆ ನಾಟಿಕೊಂಡು ಮೊಳಕೆಯೊಡೆಯುವ ಈ ಕಾಮದ ಸಸಿ ದೇಹ ಇಂದ್ರಿಯಗಳನ್ನೆಲ್ಲ ವ್ಯಾಪಿಸಿ ಹೆಮ್ಮರವಾಗಿ ಬೆಳೆದು ನಿಂತು ಬಿಡುತ್ತದೆ. ಆ ಕಾಮವನ್ನು ಕಳೆದುಕೊಳ್ಳದ ಹೊರತು ಸಂಸಾರವನ್ನು ಕಳೆದುಕೊಳ್ಳುವ ಮಾತೇ ಇಲ್ಲ ಎಂದು ಯೋಗಿವರ್ಯರಾದ ಪ್ರಹ್ಲಾದರಾಜರು ನುಡಿಯುತ್ತಾರೆ

> **“ಪ್ರಜಹಾತಿ ಯದಾ ಕಾಮಾನ್**
> **ಮಾನವೋ ಮನಸಿ ಶ್ರಿತಾನ್।**
> **ತರ್ಹ್ಯೇವ ಪುಂಡರೀಕಾಕ್ಷ**
> **ನ ಭವಾಯಾವಕಲ್ಪತೇ”**

**“ಬಗೆಯಲ್ಲಿ ಬೇರೂರಿ ನಿಂತಿಹವು ಕಾಮಗಳು ಒಂದೊಂದೇ ಒಂದೊಂದೇ ಬೇರನ್ನು ತೆಗೆದು ಒಗೆದು ನಿರ್ಮೂಲ ಮಾಡಿ ನಿರ್ಮಲಗೊಳಿಸಬೇಕು, ಹಾಗಾದಲ್ಲಿ ಬವಣೆಯ ಈ ಭವಕ್ಕೇ ನಾವು ಬೇಡದವರಾಗಿ ಬಿಡುತ್ತೇವೆ !”**

ಆದರೆ ಕಾಮನಿಗ್ರಹ ಸುಲಭದ ಮಾತಲ್ಲ. ನಿಗ್ರಹಿಸಲು ಪ್ರಯತ್ನಿಸಿದಷ್ಟೂ ಉಗ್ರವಾಗುವ ದುಷ್ಟಶಕ್ತಿಯದು. ಶಾಸ್ತ್ರವೇನೋ ಅದಕ್ಕೆ ಹತ್ತಾರು ಉಪಾಯಗಳನ್ನು ಹೇಳಿಕೊಟ್ಟಿವೆ. ನಿರಾಹಾರ ವ್ರತವನ್ನು ಮಾಡು, ದುರ್ಜನರೇ ಇಲ್ಲದ ಶುಚಿಯಾದ ಪ್ರದೇಶಕ್ಕೆ ಹೋಗಿ ನೆಲೆಸು, ಬುದ್ಧಿಪೂರ್ವಕವಾಗಿ ಭೋಗ್ಯವಸ್ತುಗಳ ಕೊಳಕನ್ನು ಮನಗಂಡು ಅದರಿಂದ ದೂರವಿರಲು ಪ್ರಯತ್ನಿಸು ಎಂದು. ಆದರೆ, ನಮ್ಮ ಒಡೆತನಕ್ಕೊಳಪಡದ ಮನಸ್ಸನ್ನು ನಾವು ನಿಗ್ರಹಿಸುವದಾದರೂ ಎಂತು ? **“ಪರಾಧೀನೋ ಜಂತುಃ ಕಿಮಪಿ ನ ವಿಧಾತುಂ ಪ್ರಭವತಿ”** ಯಾವುದರಲ್ಲಿಯೂ ಸ್ವಾತಂತ್ರ್ಯವಿಲ್ಲ ನಮಗೆ. ಹಾಗಾದರೇ ಕಾಮನಿಗ್ರಹ ಮರುಮರೀಚಿಕೆಯೆ ? ಎಂದರೆ ಶ್ರೀಮದಾಚಾರ್ಯರು ಇಂದ್ರಿಯಗಳನ್ನು

ನಿರಾಯಾಸವಾಗಿ ಗೆಲ್ಲುವ ಉಪಾಯವೊಂದನ್ನು ಹೇಳಿಕೊಡುತ್ತಾರೆ. ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ ಸೂಚ್ಯವಾಗಿ ಹೇಳಿದ ತತ್ವವನ್ನು, ಶ್ರೀಮದಾಚಾರ್ಯರು ಯಥಾರ್ಥವಾಗಿ ಅರ್ಥೈಸಿದನ್ನು ಶ್ರೀಮಟ್ಟೀಕಾಕೃತ್ಪಾದರು ತುಂಬ ಸುಂದರವಾಗಿ ಸಂಗ್ರಹಿಸಿ ಕಾಮನಿಗ್ರಹದ ಉಪಾಯವನ್ನು ಒಂದೇ ಮಾತಿನಲ್ಲಿ ಹೇಳಿಬಿಡುತ್ತಾರೆ —

**"ಶ್ರೀಹರಿಯೇ ಸಕಲಪದಾರ್ಥಗಳಿಗಿಂತಲೂ ಉತ್ಕೃಷ್ಟನಾದವನು, ಪರಮಶೋಭನನಾದವನು, ಸಾರಾತ್ ಸಾರತರನಾದವನು ಎಂದು ಅವನಲ್ಲಿಯೇ ಮನಸ್ಸನ್ನು ನಿಶ್ಚಲವಾಗಿ ನೆಲೆಗೊಳಿಸಿ ಬಿಡುವದು ಇಂದ್ರಿಯಗಳನ್ನು ಗೆಲ್ಲುವದಕ್ಕೆ, ಕಾಮವನ್ನು ನಿಗ್ರಹಿಸುವದಕ್ಕೆ ಇರುವ ಸರ್ವೋತ್ತಮ ಸಾಧನ. ನಿರಾಹಾರ, ಪುಣ್ಯದೇಶನಿವಾಸ ಮುಂತಾದವೆಲ್ಲವೂ ಪರಮಾತ್ಮ ನಮಗೆ ಕಾಮನಿಗ್ರಹವನ್ನು ಅನುಗ್ರಹಿಸುವ ಪರಿಯನ್ನು ತಿಳಿಸುವಂಥವು"**

ಅಂದರೆ, ಶ್ರೀಹರಿಯನ್ನು ನಿರಂತರವಾಗಿ ನೆನೆಯುತ್ತಾ ಕುಳಿತರೆ ಇಂದ್ರಿಯನಿಗ್ರಹ ಸುಲಭವಾಗಿ ನಮ್ಮದಾಗುತ್ತದೆ. ಅರ್ಥಾತ್, ಸ್ವತಂತ್ರವಾಗಿ ಮಾಡಹೊರಟರೆ ಅಸಾಧ್ಯವಾದ ಉಪವಾಸಾದಿನಿಯಮಗಳನ್ನು ನಿರಾಯಾಸವಾಗಿ ಮಾಡಿಸಿ ಅದರ ಫಲವಾಗಿ ಕಾಮನಿಗ್ರಹ ಇಂದ್ರಿಯನಿಗ್ರಹಗಳನ್ನು ನೀಡುತ್ತಾನೆ. ಹೀಗಾಗಿ ಭಗವತ್ಸ್ಮರಣೆಯೇ ಕಾಮನಿಗ್ರಹಕ್ಕೆ ಸರ್ವೋತ್ತಮಸಾಧನ.

ಆದ್ದರಿಂದ, ಸಾಧನಪಥದಲ್ಲಿ ಮಹಾಕಂಟಕವಾದ ಕಾಮವನ್ನು ನಿವಾರಿಸಿಕೊಳ್ಳಲು ಶ್ರೀಮದಾಚಾರ್ಯರು ಹೇಳಿಕೊಟ್ಟ ಈ ಶ್ರೇಷ್ಠಮಾರ್ಗವನ್ನು ಅನುಸರಿಸುತ್ತಿರುವ ಶ್ರೀಕನಕದಾಸರು ಕಾಮವಿನಾಶಕ್ಕಾಗಿ ಪರಮಾತ್ಮನನ್ನು **“ಭಾವಜಾರಿಪ್ರಿಯ”** ಎಂದೇ ಚಿಂತಿಸುತ್ತಾರೆ. ಬಹಳ ಸುಂದರವಾದ ಶಬ್ದ. ಕನಕದಾಸರ ಮನಸ್ಸಿನ ಅಭಿಪ್ರಾಯಗಳನ್ನೆಲ್ಲ ಸ್ಪಷ್ಟವಾಗಿ ಹೊರಗೆಡಹುವ ಶಬ್ದ. ಭಾವ ಎಂದರೆ ಮನಸ್ಸು ಎಂದರ್ಥ. ಭಾವಜ ಎಂದರೆ ಮನ್ಮಥ. ಅವನನ್ನು ಕೊಂದದ್ದರಿಂದ ಭಾವಜಾರಿ ಎಂದು

ಕರೆಸಿಕೊಂಡವರು ರುದ್ರದೇವರು. ಆ ರುದ್ರದೇವರಿಗೆ ಉಳಿದೆಲ್ಲ ಪದಾರ್ಥಗಳಿಗಿಂತಲೂ ಅತ್ಯಂತ ಪ್ರಿಯನಾದವನು ಶ್ರೀರಾಮ. ಭಾವಜಾರಿಪ್ರಿಯ.

ನಮಗೆ ಯಾವ ರೀತಿಯ ಫಲ ಬೇಕೋ ಅದೇ ರೀತಿಯಲ್ಲಿ ಶ್ರೀಹರಿಯನ್ನು ಉಪಾಸಿಸಬೇಕು. ಅದ್ದರಿಂದ ಕಾಮನಿಗ್ರಹ ಎಂಬ ಮಹಾಫಲವನ್ನು ಅಪೇಕ್ಷಿಸುತ್ತಿರುವ ಕನಕದಾಸರು ಪರಮಾತ್ಮನ್ನು ಭಾವಜಾರಿಪ್ರಿಯ ಎಂದೇ ಉಪಾಸಿಸುತ್ತಿದ್ದಾರೆ.

ಓ ಶ್ರೀರಾಮ. ನೀನು ಭಾವಜಾರಿಪ್ರಿಯ. ಮನಸ್ಸಿನ ಅಭಿಮಾನಿದೇವತೆಯಾದ, ಮನೋಜನಾದ ಕಾಮನನ್ನು ನಿಗ್ರಹಿಸಿದ ಮಹಾರುದ್ರದೇವರಿಗೆ ನೀನು ಅತ್ಯಂತ ಪ್ರಿಯನಾದವನು. ಕಾರಣ ರುದ್ರದೇವರಿಗೆ ಆ ಪರಿಯ ಶಕ್ತಿಯನ್ನು ನೀಡಿದವನು ನೀನು. ಅವರಿಗೆ ಆ ಪರಿಯ ಪರಿಶುದ್ಧ ವೈರಾಗ್ಯವನ್ನು ನೀಡಿದವನು. ಸಂಸಾರದ ಕೊಳಚೆಯಲ್ಲಿ ಕಾಮದ ಸೆಳವಿಗೆ ಮುಳುಗುತ್ತಿರುವ ನನ್ನ ಮೇಲೂ ಕರುಣೆ ತೋರು. ನನಗಿರುವ ದುಷ್ಟ ಕಾಮನೆಗಳನ್ನು ವಿನಾಶಗೊಳಿಸು. ಮೋಕ್ಷದ

ಬಯಕೆ, ಜ್ಞಾನದ ಬಯಕೆ ಅದಕ್ಕಾಗಿ ನಿಷ್ಕಾಮಪುಣ್ಯದ ಬಯಕೆ ನನ್ನಲ್ಲಿ ಅಧಿಕವಾಗುವ ಹಾಗೆ ಮಾಡು ಎಂದು.

## ನಿರಾಮಯ

ಇನ್ನು ಸಾಧನಮಾರ್ಗದ ಎರಡನೆಯ ವಿಘ್ನ ರೋಗಾದಿಗಳು. ಸಾಧನಶರೀರವಾದ ಈ ದೇಹ ನೂರು ರೋಗಗಳ ವಿಹಾರಭೂಮಿಯಾದರೆ ಶ್ರೀಹರಿಯ ಆರಾಧನೆಯನ್ನು ಮಾಡುವದೆಂತು? ಎಲ್ಲ ಇಂದ್ರಿಯಗಳೂ ಅಶೋಭನಪದಾರ್ಥಗಳಲ್ಲಿ ಆಸಕ್ತವಾಗದೇ ಶ್ರೀಹರಿಯಲ್ಲಿ ಆಸಕ್ತವಾಗುವದೇ ಸಾಧನೆಯಲ್ಲವೇ ?

ಇತರ ಪದಾರ್ಥಗಳಲ್ಲಿ ಅವು ಆಸಕ್ತವಾಗದಿರಲಿ ಎಂದು ಪ್ರಾರ್ಥನೆ ಮಾಡಿಯಾಗಿದೆ. ಇನ್ನು ಮೂಗತನ, ಕಿವುಡತನ, ಕುರುಡತನ ಮುಂತಾದ ವಿಕಲತೆಗಳಿದ್ದಲ್ಲಿ ಹರಿಯನ್ನು ಸ್ತುತಿಸುವ, ಹರಿಕಥೆಗಳನ್ನು ಕೇಳುವ, ಹರಿಮೂರ್ತಿಗಳನ್ನು ನೋಡುವ ಭಾಗ್ಯವೆಲ್ಲಿಯದು ? ಕುಂಟನಾದರೆ ಹರಿಯಾತ್ರೆಯೆಲ್ಲಿ ? ಚೊಂಚನಾದರೆ

ಹರಿಪೂಜೆಯೆಲ್ಲಿ ? ಈ ಯಾವ ವಿಕಲತೆಯಿಲ್ಲದಿದ್ದರೂ ಒಂದೇ ಒಂದು ತಲೆನೋವು ಹೊಟ್ಟೆನೋವಿನಂತ ಕ್ಷುದ್ರರೋಗ ಅಮರಿಕೊಂಡರೂ ಸಾಧನೆ ಶೂನ್ಯ. ಹೀಗಾಗಿ ಸಾಧನೆ ಮಾಡಬೇಕೆಂದರೆ ದೇಹ ನೀರೋಗವಾಗಬೇಕು. ಆ ರೀತಿಯಲ್ಲಿ ಅರೋಗ್ಯಪೂರ್ಣ ದೇಹವನ್ನು ಪಡೆಯಲಿಕ್ಕೆ ಇರುವ ಸರ್ವೋತ್ತಮ ಉಪಾಯ ಶ್ರೀಹರಿಯನ್ನು ನಿರಾಮಯ ಎಂದು ಉಪಾಸಿಸುವದು. ಅದಕ್ಕಾಗಿ, ರೋಗರಹಿತದೇಹವನ್ನು ಪಡೆದು ಸಾಧನೆ ಮಾಡಲಿಕ್ಕಾಗಿ ಪರಮಾತ್ಮನ ಚಿಂತನೆಯನ್ನು ನಿರಾಮಯ ಎಂದು ಮಾಡುತ್ತಿದ್ದಾರೆ. ಆಮಯ ಎಂದರೆ ರೋಗ. ನಿರಾಮಯ ಎಂದರೆ ರೋಗರಹಿತ ಎಂದರ್ಥ.

ಯಾವುದೇ ರೋಗವಾದರೂ ಅಪಥ್ಯ ಅಥವಾ ಅಜೀರ್ಣಮೂಲಕವಾದದ್ದು. ನಾವು ಸೇವಿಸುವ ಪದಾರ್ಥ ನಮ್ಮ ದೇಹದಲ್ಲಿ ಜೀರ್ಣವಾಗದೇ ಅಹಿತವಾದಾಗ ರೋಗ ಹುಟ್ಟಿಕೊಳ್ಳುತ್ತದೆ. ಶ್ರೀಹರಿ ನಿತ್ಯತೃಪ್ತನಾದ ಕಾರಣ ಎಂದಿಗೂ ನಮ್ಮ ರೀತಿಯಲ್ಲಿ ಆಹಾರವನ್ನೇ ಸ್ವೀಕರಿಸುವದಿಲ್ಲ.

ಅದಕ್ಕಾಗಿಯೇ ಅವನನ್ನು ವೇದಗಳು “ಅನಶನ” ಎಂದು ಕರೆಯುತ್ತವೆ. ಹೀಗಾಗಿ ರೋಗ ಬರುವ ಪ್ರಶ್ನೆಯೆಲ್ಲಿಯದು ?

ಇನ್ನು ಕೇವಲ ಲೀಲಾರೂಪವಾಗಿ ಇಡಿಯ ಚರಾಚರಪದಾರ್ಥಗಳ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುತ್ತಾನೆ. ಮಾಡಿ ಲೀಲೆಯಿಂದಲೇ ಸಕಲಪದಾರ್ಥಗಳನ್ನೂ ಭೋಗಿಸುತ್ತಾನೆ. ಅಷ್ಟೇಕೆ ಪ್ರಳಯದ ಸಂದರ್ಭದಲ್ಲಿ ಸಮಗ್ರ ಬ್ರಹ್ಮಾಂಡವನ್ನೇ ‘ತಿಂದು’ ಉದರದಲ್ಲಿಟ್ಟುಕೊಳ್ಳುತ್ತಾನೆ ಎಂದು ಉಪನಿಷತ್ತುಗಳು ತಿಳಿಸುತ್ತವೆ. ಹೀಗೆ ಇಡಿಯ ಚರಾಚರಪದಾರ್ಥಗಳನ್ನು ಒಡಲಲ್ಲಿರಿಸಿಕೊಂಡರೂ ಮತ್ತೆ ಸೃಷ್ಟಿಕಾಲದಲ್ಲಿ ಅವೆಲ್ಲವನ್ನೂ ಹೊರತೆಗೆದು ಮತ್ತೆ ಸೃಷ್ಟಿಸುತ್ತಾನೆ. ಹೀಗಾಗಿ ಅವನಿಗೆ ರೋಗವನ್ನು ತಂದೀಯುವ ಪದಾರ್ಥ ಜಗತ್ತಿನಲ್ಲಿ ಯಾವುದಿದೆ ? ಕಾರಣ ಜಗತ್ತಿನ ಸಮಗ್ರ ಪದಾರ್ಥಗಳು ಬ್ರಹ್ಮದೇವರ ಕಾಲಮಾನದಲ್ಲಿ ನೂರುವರುಷ ಅವನ ಉದರದಲ್ಲಿಯೇ ಇರುತ್ತವೆ. ಆದರೂ ಅವನಿಗೆ ರೋಗ ಬರುವದಿಲ್ಲ. ಇಷ್ಟರ ಬಳಿಕವೂ ಅವನಿಗೆ ರೋಗವನ್ನು ತಂದೀಯುವ ಯಾವ ಪದಾರ್ಥ ಜಗತ್ತನಲ್ಲಿ ಉಳಿದಿದೆ ? ಈ

ಪ್ರಮೇಯವನ್ನು ಶ್ರೀವಾದಿರಾಜರು ಲಕ್ಷ್ಮೀಶೋಭಾನೆಯಲ್ಲಿ ಬಹಳ ಸುಂದರವಾಗಿ ನಿರೂಪಿಸಿದ್ದಾರೆ

**"ಎಲ್ಲ ಜಗವ ನುಂಗಿ ದಕ್ಕಿಸಿಕೊಂಬವಗೆ**
**ಸಲ್ಲದು ರೋಗರುಜಿನವು ।**
**ಬಲ್ಲ ವೈದ್ಯರ ಕೇಳಿ ಅಜೀರ್ತಿಮೂಲ-**
**ದಿಲ್ಲ ಸಮಸ್ತ ರುಜಿನವು"**

ಸಮಸ್ತರುಜಿನವು ಎಲ್ಲ ರೋಗಗಳು ಅಜೀರ್ತಿಮೂಲವಲ್ಲದಿಲ್ಲ ಅಜೀರ್ಣಮೂಲವಲ್ಲದೇ ಇಲ್ಲ. ಎಲ್ಲ ರೋಗಗಳೂ ಅಪಥ್ಯಮೂಲವಾದದ್ದು ಎಂದರ್ಥ.

ಇನ್ನು ರೋಗಹುಟ್ಟಲು ಬೇಕಾದ ಪದಾರ್ಥಗಳೇ ಭಗವಂತನಲ್ಲಿ ಇಲ್ಲವಾದ್ದರಿಂದಲೂ ಭಗವಂತ ನಿರಾಮಯ. ರೋಗ ಹುಟ್ಟುವದೇ ರಕ್ತ ಮಾಂಸ ನರ ಎಲುವುಗಳಲ್ಲಿ. ಭಗವಂತನ ದೇಹ ಆ ರೀತಿಯ ಪ್ರಾಕೃತ ಮಾಂಸ ಅಸ್ಥಿಗಳಿಂದ ನಿರ್ಮಾಣವಾದ ದೇಹವೇ ಅಲ್ಲ. **"ನ ತಸ್ಯ ಪ್ರಾಕೃತಾ**

**ಮೂರ್ತಿರ್ಮಾಂಸಮೇದೋಧಿಸ್ಥಿಸಂಭವಾ**” ಅವನ ಶರೀರ ಅಪ್ರಾಕೃತ, ಚಿನ್ಮಯ, ನಿತ್ಯ ಮತ್ತು ಪರಿಶುದ್ಧವಾದದ್ದು. ಆದ್ದರಿಂದ ಕಲುಷಿತವಾದ ವಿಕಾರಶೀಲವಾದ ರಕ್ತಮಾಂಸಾದಿಗಳಲ್ಲಿ ಮಾತ್ರ ಹುಟ್ಟುವ ರೋಗವು ಪರಿಶುದ್ಧವಾದ ನಿತ್ಯವಾದ ಜ್ಞಾನಾದಿಗುಣಾತ್ಮಕವಾದ ಅಪ್ರಾಕೃತವಾದ ಭಗವಂತನ ಶರೀರದಲ್ಲಿ ಹೇಗೆ ಹುಟ್ಟಲು ಸಾಧ್ಯ ? ನೀರಿನಲ್ಲಿ ಮಾತ್ರ ಹುಟ್ಟಿ ಬದುಕುವ ಮೀನು ಹಾಲಿನಲ್ಲಿ ಹುಟ್ಟಲು ಸಾಧ್ಯವೇ ? ಸಾಧ್ಯವಿಲ್ಲ.

ಇನ್ನು ಜೀವನಿಗೆ ರೋಗ ಬರಲು ಒಂದು ಪಾಪಕರ್ಮವಿರಬೇಕು. **“ಜನ್ಮಾಂತರಕೃತಂ ಪಾಪಂ ವ್ಯಾಧಿರೂಪೇಣ ಬಾಧತೇ**” ಪರಮಾತ್ಮನಿಗೆ ಕರ್ಮದ ಲೇಪವೇ ಇಲ್ಲ. ಪುಣ್ಯಪಾಪಗಳ ಬಂಧನ ಅವನಿಗಿಲ್ಲ. ಹೀಗಾಗಿ ರೋಗನಿಮಿತ್ತವಾದ ಪಾಪಕರ್ಮಗಳೇ ಭಗವಂತನಲ್ಲಿ ಇಲ್ಲವಾದ್ದರಿಂದ ಪರಮಾತ್ಮ ರೋಗಗಳ ಬಾಧೆಗೆ ಒಳಗಾಗುವವನಲ್ಲ. ನಿರಾಮಯ.ಎಲ್ಲದಕ್ಕಿಂತ ಮಿಗಿಲಾದ ಕಾರಣವೆಂದರೆ ಭಗವಂತ ಸ್ವತಂತ್ರನಾದವನು, ಸರ್ವನಿಯಾಮಕನಾದವನು. ರೋಗ ಎನ್ನುವ ಪದಾರ್ಥಕ್ಕೆ ಅಸ್ತಿತ್ವದಿಂದಾರಂಭಿಸಿ

ಸಕಲ ಶಕ್ತಿ ಸಾಮರ್ಥ್ಯಗಳನ್ನು ನೀಡಿದವನೇ ಭಗವಂತ. ಆ ರೋಗದಲ್ಲಿ ರೋಗ ಎಂಬ ಹೆಸರಿನಿಂದ ಇದ್ದು ಅದನ್ನು ಸರ್ವಾತ್ಮನಾ ನಿಯಮಿಸುವವನೂ ಭಗವಂತನೇ. ಹೀಗೆ ಸರ್ವಪ್ರಕಾರದಲ್ಲಿಯೂ ಭಗವಂತನಿಗೆ ಅಧೀನವಾದ ಆ ರೋಗ ಎನ್ನುವ ಕ್ಷುದ್ರಪದಾರ್ಥವಾಗಲೀ ಅದರ ನಿಯಾಮಕಜೀವರಾಗಲೀ ಅನಂತಶಕ್ತಿಯಾದ ಸರ್ವನಿಯಾಮಕನಾದ ಭಗವಂತನಿಗೆ ಹೇಗೆ ಉಪದ್ರವ ನೀಡಲು ಸಾಧ್ಯ ? ಸರ್ವಥಾ ಸಾಧ್ಯವಿಲ್ಲ. ಅವನು ಉಪೇಕ್ಷೆ ಮಾಡಿದರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಈ ರೋಗ ಅವನನ್ನು ಹೇಗೆ ಬಾಧಿಸಲು ಶಕ್ಯ ?

ಆದ್ದರಿಂದ ಭಗವಂತ ನೀಡಿದ ಸಕಲಾಯುಷ್ಯವನ್ನು ಅವನ ಸೇವೆಯಲ್ಲಿಯೇ ಕಳೆಯ ಬಯಸುತ್ತಿರುವ ಕನಕದಾಸರು ಅದಕ್ಕೆ ಪ್ರತಿಬಂಧಕವಾದ ಕಾಮ ಮತ್ತು ರೋಗಗಳ ಉಪದ್ರವ ಉಂಟಾಗದಿರಲಿ ಎಂದು ಶ್ರೀಹರಿಯನ್ನು ಭಾವಜಾರಿಪ್ರಿಯ ನಿರಾಮಯ ಎಂದೇ ಉಪಾಸಿಸುತ್ತಾರೆ.

## ರಾವಣಾಂತಕ ರಘುಕುಲಾನ್ವಯ

ನಿಜ. ಭಗವಂತನಲ್ಲಿ ಈ ರೀತಿಯಾಗಿ ಕಾಮನಿಗ್ರಹದ ರೋಗನಿವಾರಕತ್ವದ ಸಾಮರ್ಥ್ಯವಿದೆ ಎಂದು ಒಪ್ಪೋಣ. ಆದರೆ ಇಷ್ಟೆಲ್ಲ ಮಹಾಮಹಿಮಾಶಾಲಿಯಾದ ಅವನ ನಮ್ಮ ನೋವನ್ನು ಸಮಸ್ಯೆಯನ್ನು ಪರಿಹರಿಸು ಎಂದು ಬೇಡಿದ ಮಾತ್ರಕ್ಕೆ ಅವನು ಪರಿಹರಿಸಬೇಕಲ್ಲ. ಕಾರಣ, ಜಗತ್ತಿನಲ್ಲಿ ಹಣವಿದ್ದವರು, ರೂಪವಿದ್ದವರು, ಗುಣವಿದ್ದವರು, ನಿರ್ಧನರಿಂದ ರೋಗಿಗಳಿಂದ ದೂರವಾಗಿಯೇ ಉಳಿಯುತ್ತಾರೆ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಕನಕದಾಸರು ಪರಮಾತ್ಮನ ಭಕ್ತವಾತ್ಸಲ್ಯ ಎಂಬ ಗುಣವನ್ನು ತುಂಬ ಸುಂದರವಾಗಿ ಮುಂದಿನ ರಾವಣಾಂತಕ ರಘುಕುಲಾನ್ವಯ ಎಂಬ ಶಬ್ದಗಳಿಂದ ಅನುಸಂಧಾನ ಮಾಡುತ್ತಾರೆ.

ನಿಜವೇ, ಧನಿಕರು, ಸುರೂಪಿಗಳು ನಿರ್ಧನರಿಂದ ಕುರೂಪಿಗಳಿಂದ ರೋಗಿಷ್ಠರಿಂದ ದೂರವೇ ಇರುತ್ತಾರೆ. ಖಾಯಿಲೆ ಬಿದ್ದವನ ಬಳಿ ಬಂದು ಅವನ ಸೇವೆ ಮಾಡಲು ಬೇರೆಯವರಿರಲಿ

ಬಂಧುಗಳೇ ದೂರ ಸರಿಯುತ್ತಾರೆ. ಮುಂದಾಗುವದಿಲ್ಲ. ಆದರೆ, ಇವರೆಲ್ಲಾ ಪ್ರಾಕೃತರು. ಶ್ರೀಹರಿ ಅಪ್ರಾಕೃತ. ಅವನಿಗೆ ಈ ಪ್ರಾಕೃತಜನರ ಸ್ವಭಾವದಂತಹ ಸ್ವಭಾವವಿಲ್ಲ. ಬಳಿ ಬರುವ ಭಕ್ತಜನರ ಮೊರೆಗೆ ಕರಗುವ ಕರುಣಾಳು ಅವನು. ಕರಗಿ ಅವರ ದುಮ್ಮಾನಗಳನ್ನು ತಾನೇ ನಿಂತು ಪರಿಹರಿಸುವ ಭಕ್ತವತ್ಸಲ ಅವನು. **“ರಾವಣಾಂತಕ”**

ಹಿಂದೊಮ್ಮೆ ಲಂಕೆಯಲ್ಲಿ ರಾವಣ ಎಂಬ ಅಸುರನಿದ್ದ. ವಿಪರೀತ ಕಾಮುಕ. ಎಲ್ಲ ಸುಂದರ ಸ್ತ್ರೀಯರೂ ತನ್ನ ಮಂಚದಲ್ಲಿರಬೇಕು, ಎಲ್ಲ ಸುಂದರ ಪದಾರ್ಥಗಳೂ ತನ್ನ ಅರಮನೆಯಲ್ಲಿರಬೇಕು ಎಂಬ ಕೆಟ್ಟ ಬಯಕೆಯಿದ್ದವನು. ಅಸದೃಶ ಬಾಹುಬಲವಿತ್ತವನಿಗೆ. ಬ್ರಹ್ಮನ ವರವನ್ನು ಪಡೆದಿದ್ದರಿಂದ ಅವನನ್ನು ಎದುರಿಸುವವರೇ ಇರಲಿಲ್ಲ. ಅಂಥ ಸಂದರ್ಭದಲ್ಲಿ ಎಲ್ಲ ಸ್ತ್ರೀಯರು ಪುರುಷರು ದೈನ್ಯದಿಂದ ಕಾಪಾಡು ಎಂದು ಬೇಡಿದಾಗ, ಋಷಿಗಳು, ಗಂಧರ್ವರು, ಯಕ್ಷರು, ಸ್ವಯಂ ಭೂಮಿದೇವಿ, ಇಂದ್ರ ರುದ್ರ ಬ್ರಹ್ಮ ಹೀಗೆ

ಸಮಸ್ತ ಸಜ್ಜನ ಸಮುದಾಯ ಶ್ರೀಹರಿಯನ್ನು ಒಕ್ಕೊರಲಿನಿಂದ ಪ್ರಾರ್ಥಿಸಿದಾಗ ಅವರಿಗಾಗಿ ರಘುಕುಲದಲ್ಲಿ ಶ್ರೀರಾಮಚಂದ್ರನಾಗಿ ಅವತರಿಸಿ ಲೋಕಕಂಟಕ ರಾವಣನ ಅಂತಗಾಣಿಸಿದ ರಾವಣಾಂತಕ.

ಅವನಲ್ಲಿ ಭಕ್ತವತ್ಸಲತೆ ಇಲ್ಲದಿದ್ದರೆ ಅವನೇಕೆ ರಘುಕುಲಾನ್ವಯನಾಗಿ ಅವತರಿಸುತ್ತಿದ್ದ ? ಹಾಗೆ ಅವತರಿಸಿ ಬರಲು ಅವನಿಗೆ ಮತ್ತೇನು ಕಾರಣವಿತ್ತು ? ಹಾಗೆ ಅವತರಿಸಿ ಬಂದಾಗಲೂ ತುಂಬ ಸುಲಭವಾಗಿ ಮೀರಬಹುದಾಗಿದ್ದ ತಂದೆಯ ಮಾತನ್ನು, ಯಾವುದನ್ನು ಮೀರಬೇಕೆಂದು ಸ್ವಯಂ ದಶರಥನೇ ಅಪೇಕ್ಷೆಪಟ್ಟನೋ, ಅದನ್ನು ಮೀರದೆ, ಕಾಡಿಗೆ ಬಂದು, ಮಡದಿಯನ್ನು ರಾವಣ ಅಪಹರಿಸುವಂಥಹ ಪ್ರಸಂಗವನ್ನು ಸೃಷ್ಟಿಸಿ ಅವಳನ್ನು ಹಿಂತರಲು ಲಂಕೆಗೆ ಬಂದು ಅವನೆಲ್ಲ ಅನುಚರರನ್ನು ಕೊಂದು ಅವನನ್ನು ಕೊಲ್ಲುವ ಕಾರಣವೇನಿತ್ತು ? ಮತ್ತೂ, ಸೀತೆ ದುರ್ಗೆಯ ಅವತಾರ. ಅವಳನ್ನು ಸ್ಪರ್ಶ ಮಾಡುವ ಸಾಮರ್ಥ್ಯವೂ ರಾವಣನಿಗಲ್ಲ , ಇಡಿಯ ಚೇತನಪ್ರಪಂಚದಲ್ಲಿಯೇ ಯಾರಿಗೂ ಇಲ್ಲ.

ಹೀಗಾಗಿ ವಸ್ತುಸ್ಥಿತಿಯಲ್ಲಿ ಅವಳಿಗೆ ಆಪತ್ತು ಬಂದಿರಲೇ ಇಲ್ಲ. ಆದರೂ ಆ ರೀತಿಯಾದ ಘಟನೆಯನ್ನು ಸೃಷ್ಟಿಸಿ ರಾವಣನನ್ನು ಕೊಲ್ಲುವದಕ್ಕೆ ಬೇರೇನು ಕಾರಣವಿತ್ತು ? ಇದ್ದುದೊಂದೇ ಕಾರಣ, ಅದು ಭಕ್ತವಾತ್ಸಲ್ಯ. ಭಕ್ತರ ಪ್ರಾರ್ಥನೆಯನ್ನು ಮನ್ನಿಸಿ ಭಗವಂತ ಭಕ್ತರನ್ನು ಕಾಯ್ದೇ ಕಾಯುತ್ತಾನೆ ಎಂಬುದಕ್ಕೆ ಶ್ವೇತದ್ವೀಪನಿವಾಸಿಯಾದ ಅವನು ರಘುಕುಲದಲ್ಲಿ ಅವತರಿಸಿ ರಾವಣನನ್ನು ಕೊಂದದ್ದೇ ಸಾಕ್ಷಿ. ಹೀಗಾಗಿ ನಾವು ನಮ್ಮ ಮನಸ್ಸಿನ ಕಾಮವನ್ನು ಕೊಲ್ಲು, ರೋಗದ ಬಾಧೆಗಳನ್ನು ಪರಿಹರಿಸು ಎಂದು ಭಕ್ತಿಯಿಂದ ಬೇಡಿದಲ್ಲಿ ಅದನ್ನು ಪಾಲಿಸಿಯೇ ಪಾಲಿಸುತ್ತಾನೆ ಎಂದು ಆ ತತ್ವದಲ್ಲಿರುವ ನಿಶ್ಚಯವನ್ನು ತೋರಿಸಲು ದಾಸರು “ರಾವಣಾಂತಕ ರಘುಕುಲಾನ್ವಯ” ಎಂಬ ಶಬ್ದಗಳನ್ನು ಬಳಸಿದ್ದಾರೆ.

## ದೇವ

ಇದೆಲ್ಲಾ ಸರಿ. ಆದರೆ ಭಕ್ತರ ಮೇಲೆ ವಾತ್ಸಲ್ಯ ತೋರುತ್ತ ಭಗವಂತ ತನಗೆ ತಾನೇ ವಿಪತ್ತನ್ನು ತಂದುಕೊಂಡಂತಾಗಲಿಲ್ಲವೇ ? ಭಸ್ಮಾಸುರನಿಗೆ

ವರವಿತ್ತ ಶಂಕರನ ಹಾಗೆ. ಭಕ್ತರ ಮೇಲಿನ ಪ್ರೀತಿಯಿಂದ ಶ್ವೇತದ್ವೀಪವನ್ನು ಬಿಟ್ಟು ಭೂಮಿಗೆ ಬರಬೇಕಾಯಿತು, ಜನ್ಮವಿಲ್ಲದವನು ತಂದೆತಾಯಿಗಳನ್ನು ಪಡೆಯಬೇಕಾಯಿತು, ಬ್ರಹ್ಮಾದಿಗಳಿಂದ ಕೈಂಕರ್ಯವನ್ನು ಸ್ವೀಕರಿಸುವವನು ಕೈಕಯಿಯ ವೈಷಮ್ಯವನ್ನು ಅನುಭವಿಸಬೇಕಾಯಿತು. ಒಟ್ಟಾರೆ ಅವನು ಸಂಕಟಕ್ಕೆ ಒಳಬೇಕಾಯಿತು ಎಂಬ ಅಪಕ್ವಬುದ್ಧಿಯ ಆಕ್ಷೇಪಕ್ಕೆ ದೇವ ಎಂಬ ಪದವನ್ನು ಉತ್ತರವನ್ನಾಗಿ ಬಳಸಿ ಈ ಮೂಲಕ ಪರಮಾತ್ಮನ ಎಲ್ಲಾ ಕ್ರಿಯೆಗಳನ್ನು ಅವನ ಕ್ರೀಡಾರೂಪ ಎಂದು ಚಿಂತನೆ ಮಾಡುತ್ತಾರೆ.ದೇವ ಎಂದರೆ ಸಕಲ ಕ್ರಿಯೆಗಳನ್ನೂ ಆಟವಾಡುವವನ ಹಾಗೆ ಮಾಡುವನು ಎಂದರ್ಥ.

ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ ದೇವಶಬ್ದದ ಮೂಲಪದವಾದ ದಿವುಧಾತುವಿನ ಹತ್ತು ಅರ್ಥಗಳುನ್ನು ತಿಳಿಸುತ್ತಾ ಕ್ರೀಡೆ ಎನ್ನುವದೂ ಆ ಧಾತುವಿನ ಒಂದು ಅರ್ಥ ಎಂದು ತಿಳಿಸುತ್ತಾರೆ. ಸೃಷ್ಟ್ಯಾದಿ ಸಮಸ್ತಕ್ರಿಯೆಗಳೂ ಅವನಿಗೊಂದು ಕ್ರೀಡೆ ಎಂಬ ಮಾತನ್ನೂ ಹೇಳುತ್ತಾರೆ. **“ದಿವು ಕ್ರೀಡಾ ವಿಜೀಗೀಷಾ ವ್ಯವಹಾರ ದ್ಯುತಿ ಸ್ತುತಿ ಮದ ಮೋದ**

**ಸ್ವಪ್ನ ಕಾಂತಿ ಗತಿಷು”** ಎಂದು. ಹೀಗಾಗಿ ‘ದೀವ್ಯತಿ’ ಸಕಲಕ್ರಿಯೆಗಳನ್ನೂ ಕ್ರೀಡಾರೂಪವಾಗಿ ಮಾಡುವವನು ಎಂದು ದೇವಶಬ್ದದ ಅರ್ಥವಾಗುತ್ತದೆ. ಹೇಗೆ ಆಟವಾಡುವ ಮಕ್ಕಳು ಎಷ್ಟೇ ಆಟವಾಡಿದರೂ ಅದು ಅವರಿಗೆ ಶ್ರಮ ಎಂದನಿಸುವದಿಲ್ಲವೋ, ಹಾಗೆಯೇ ಮೂಲರೂಪದಿಂದ ಮಾಡುವ ಬಹ್ಮಾಂಡನಿರ್ಮಾಣ ಮುಂತಾದ ಕ್ರಿಯೆಗಳೂ ಮತ್ತು ಅವತಾರಗಳಲ್ಲಿ ಮಾಡುವ ಕ್ರಿಯೆಗಳೂ ಪರಮಾತ್ಮನಿಗೆ ಒಂದು ಲೀಲೆ. ಅದರಿಂದ ಎಂದಿಗೂ ಅವನಿಗೆ ಶ್ರಮ-ದುಃಖಗಳು ಉಂಟಾಗುವದಿಲ್ಲ.

## ಅಸುರವಿರೋಧಿ

ಅಷ್ಟೇ ಅಲ್ಲ. ಅವತಾರರೂಪಗಳಿಂದ ಭಗವಂತ ಮಾಡುವ ಕ್ರಿಯೆ ಅಸುರಜನಮೋಹಕವೂ ಹೌದು. ತಿಳುವಳಿಕೆಯುಳ್ಳ ಸಜ್ಜನರು ಶಾಸ್ತ್ರಗಳಿಂದ ಶ್ರೀರಾಮ ಶ್ರೀಕೃಷ್ಣ ರೂಪಗಳಿಂದ ಮಾಡಿದ ಕ್ರಿಯೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ಭಜಿಸುತ್ತಾರೆ. ಕ್ಲಿಷ್ಟ ಶಾಸ್ತ್ರಾಧ್ಯಯನದ ಗೋಜಿಗೇ ಹೋಗದ ಜನರು ‘ಪರಶುರಾಮ ಬೇರೆ ಶ್ರೀರಾಮ

ಬೇರೆ, ಕಾರಣ, ಪರಶುರಾಮ ಸೋತವನು, ರಾಮ ಗೆದ್ದವನು' 'ರಾಮ ಸೀತೆಯನ್ನು ಕಳೆದುಕೊಂಡ' 'ರಾಮ ಸೀತಾವಿಯೋಗದ ದುಃಖವನ್ನು ಅನುಭವಿಸಿದ' 'ಕಪಿಗಳ ಸಹಾಯವಿರದಿದ್ದಲ್ಲಿ ರಾಮನಿಗೆ ರಾವಣನನ್ನು ಗೆಲ್ಲಲಾಗುತ್ತಿರಲಿಲ್ಲ' ಎಂದೆಲ್ಲ ಭ್ರಾಂತಿಗೆ ಒಳಗಾಗಿ ಅದರ ದುಷ್ಫಲವನ್ನು ಪಡೆಯುತ್ತಾರೆ. ಸಮಾಜಕಂಟಕರಾದ ಆ ಜನ ಅದೇ ರೀತಿಯಲ್ಲಿ ತಮಸ್ಸನ್ನು ಪಡೆಯಬೇಕು ಎಂಬ ಕಾರಣಕ್ಕಾಗಿ ಭಗವಂತ ಈ ರೀತಿಯಲ್ಲಿ ಲೀಲೆಯನ್ನು ತೋರುತ್ತಾನೆ. ಕಾರಣ ಅವನು "ಅಸುರವಿರೋಧಿ" ॥ ೨ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491